5. ಏಡ್ಸ್ ನಿಯಂತ್ರಣದ ಬಗ್ಗೆ ವೈದ್ಯರುಗಳಿಗೆ ಹಾಗೂ ವೈದ್ಯೇತರ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
6. ಜಿಲ್ಲಾ ಮಟ್ಟದ ಉಪ ಜಿಲ್ಲಾ ಮಟ್ಟದ ಆಸ್ಪತ್ರೆಗಳಲ್ಲಿಯ ರಕ್ತ ನಿಧಿ ಕೇಂದ್ರಗಳನ್ನು ಹಾಗೂ ಎಸ್.ಟಿ.ಡಿ. ಕೇಂದ್ರಗಳನ್ನು ಆಧುನೀಕರಿಸಿ ಬಲವರ್ಧಕ ಗೊಳಿಸಲಾಗುತ್ತಿದೆ.
7. ಜನಸಾಮಾನ್ಯರಲ್ಲಿ ಏಡ್ಸ್ ರೋಗದ ಬಗ್ಗೆ ಅರಿವು ಮೂಡಿಸಲು ಸಮೂಹ ಮಾಧ್ಯಮ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ, ಹಾಗೂ ಸ್ವಯಂಸೇವಾ ಸಂಸ್ಥೆಗಳ ಸೇವೆಯ ಸಹಕಾರವನ್ನೂ ಸಹ ಪಡೆದುಕೊಳ್ಳಲಾಗುತ್ತಿದೆ.

ಲ್ಯಾಮಿಂಗ್‌ಟನ್ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ ದೇಣಿಗೆ ವಸೂಲಿ.

2636 - ಶ್ರೀ ಅಶೋಕ ಕಾಟವೆ. (ಹುಬ್ಬಳ್ಳಿ ನಗರ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹುಬ್ಬಳ್ಳಿ-ಧಾರವಾಡ ಮಹಾ ನಗರಸಭೆಯ ಅಧೀನದ ಹುಬ್ಬಳ್ಳಿಯ ಲ್ಯಾಮಿಂಗ್‌ಟನ್ ಗಂಡು ಹಾಗೂ ಹೆಣ್ಣುಮಕ್ಕಳ ಶಾಲೆಯಲ್ಲಿ ಕಳೆದೆರಡು ವರ್ಷದಿಂದ ವಿದ್ಯಾರ್ಥಿಗಳ ಪ್ರವೇಶ ಕಾಲಕ್ಕೆ ವಿದ್ಯಾರ್ಥಿಗಳಿಂದ ದೇಣಿಗೆ ವಸೂಲು ಮಾಡ್ತಾಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಬಗ್ಗೆ ಸರ್ಕಾರದ ಕ್ರಮವೇನು, ದೇಣಿಗೆ ವಸೂಲಿ ಮಾಡಿದ್ದರೆ ಶಾಲೆಗಳಿಗೆ ಸಂದಾಯವಾದ ಹಣವೆಷ್ಟು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು).

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಕೊಡಗಿನಲ್ಲಿ ಸ್ವಂತ ಉಪಯೋಗಕ್ಕೆ ಮರವನ್ನು ಸಾಗಿಸಲು ಅನುಮತಿ.

2539 - ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರ ಪೇಟೆ) : ಮಾನ್ಯ ಅರಣ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.?

ಅ) *ಕೊಡಗಿನಲ್ಲಿ ಸ್ವಂತ ಉಪಯೋಗಕ್ಕೆ ನೂರು ಘನ ಅಡಿ ಮರದ ಅನುಮತಿಯನ್ನು ಕೊಟ್ಟಿರುವುದನ್ನು ಮೂನ್ನೂರು ಘನ ಅಡಿಗೆ ಏರಿಸಬೇಕೆಂದು ಕೊಡಗು ಜನತೆಯ ಬೇಡಿಕೆ ಸರ್ಕಾರದ ಮುಂದಿದೆಯೇ?*

ಆ) *ಕೊಡಗಿನ ಜನರು ಮೈಸೂರು ಬೆಂಗಳೂರುಗಳಲ್ಲಿ ಮನೆ ಕಟ್ಟಬೇಕಾದರೆ ಈ ಮರವನ್ನು ಸಾಗಿಸಲು ಅನುಮತಿಯ ಬೇಡಿಕೆ ಸರ್ಕಾರದ ಮುಂದಿದೆಯೇ? ಹಾಗಿದ್ದಲ್ಲಿ ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?*

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976ರ ನಿಯಮ, 8(6)ರ ಪ್ರಕಾರ ಕೊಡಗಿನಲ್ಲಿಯೂ 100 ಘನ ಅಡಿ ಮರ ಹಾಗೂ 5 ಟನ್ ಸೌದೆಯನ್ನು ಸ್ವಂತ ಉಪಯೋಗಕ್ಕೆ ಉಪಯೋಗಿಸಿಕೊಳ್ಳಲು ಅವಕಾಶವಿದೆ. 300 ಘನ ಅಡಿಗಳವರೆಗೆ ಮರವನ್ನು ಸ್ವಂತ ಉಪಯೋಗಕ್ಕೆ ಜಿಲ್ಲಾಧಿಕಾರಿಗಳು ಸ್ಪಷ್ಟ ಅಭಿಪ್ರಾಯ ಹಾಗೂ ವಿಶೇಷ ಅನುಮತಿ ನೀಡಿದಲ್ಲಿ ಮಾತ್ರ ಕೊಡಲು ಅವಕಾಶವಿದ್ದು ಈ ಕಡಿದ ಮರವನ್ನು ಜಿಲ್ಲೆಯೊಳಗೆ ಮಾತ್ರ ಉಪಯೋಗಿಸಿಕೊಳ್ಳಲು ಅವಕಾಶವಿರುತ್ತದೆ.

ಆ) 1910ರ ರೆವಿನ್ಯೂ ಸೆಟ್ಲಮೆಂಟ್ ಆಫ್ ಕೂರ್ಗ್ ಕಾಯ್ದೆಯ (10)ನೇ ಕಲಂ ಪ್ರಕಾರ ಸ್ವಂತ ಜಮೀನುಗಳಲ್ಲಿನ ಮರಗಳನ್ನು ಸ್ವಂತಕ್ಕಾಗಿ ಸಂಬಂಧಪಟ್ಟ